

ಕೇದಾರನಾಥದಲ್ಲಿನ ದೇವರ ಪಲ್ಲಕ್ಕಿ

ಪಹಾಡಿ ಎನ್ನುವುದು ಭಾಷೆಯ ಹೆಸರೂ ಹೌದು. ಘನಕಾಲ ಎಂಬ ಹಳ್ಳಿಯಲ್ಲಿ ವಸ್ತಿ ಮಾಡಿದಾಗ, ಮನೆಯ ರೈತನಿಗೆ ಪಹಾಡಿ ಹಾಡುಗಳನ್ನು ಕೇಳುವ ಹಂಬಲ ವ್ಯಕ್ತಪಡಿಸಿದೆವು. ‘ನಮ್ಮೂರಲ್ಲಿ ಒಂದು ತಂಡವಿದೆ. ನೀವೂ ಜತೆಗೆ ಹಾಡುವಿರಿ ಎಂದರೆ ಅವರನ್ನು ಕರೆತರುತ್ತೇನೆ’ ಎಂದನು. ಆಗಲೆಂದೆವು. ರಾತ್ರಿಯೂಟ ಮುಗಿಸಿ ಏಳೆಂಟು ಹುಡುಗ



ಹಿಮಾಲಯದ ಭಕ್ತಿ ಗಾಯಕ



ಗುಡಿಯ ಕಾಷ್ಠಶಿಲ್ಪದಲ್ಲಿ ಗಾಯಕರು– ನರ್ತಕರು

ಹುಡುಗಿಯರು ಬಂದರು. ರೈತನೂ ಅವನ ಹೆಂಡತಿ ಮಕ್ಕಳೂ ಕುಣಿತಕ್ಕೆ ಸೇರಿಕೊಂಡರು. ಅದೊಂದು ವನದೇವತೆ ಕುರಿತ ಹಾಡು. ತಣ್ಣನೆಯ ರಾತ್ರಿಯಲ್ಲಿ, ಎಳೆದಿಂಗಳ ಬೆಳಕಿನಲ್ಲಿ ಸೇಬಿನ ತೋಟದ ಮಧ್ಯೆ, ಪಾರ್ವತಿ ನದಿಯ ಮರ್ಮರ ಶ್ರುತಿಯಲ್ಲಿ ಮಹಾದೇವನ ಗುಡಿಯ ಮಗ್ಗುಲಲ್ಲಿ ಹಾಡಿಕೆ ಶುರುವಾಯಿತು. ಅದು ರಾತ್ರಿಯಿಡೀ ಹಾಡಿದರೂ ಮುಗಿಯದು ಎಂಬಷ್ಟು ದೀರ್ಘವಾಗಿತ್ತು. ಹಿಮಾಲಯದವರಿಗೆ ಹಾಡು ಶುರು ಮಾಡಿ ಗೊತ್ತು. ನಿಲ್ಲಿಸುವುದಕ್ಕೆ ಬಾರದು. ಹಿಮ ಸುರಿಯುತ್ತ, ಮಳೆ ಬೀಳುತ್ತ ಮನುಷ್ಯರನ್ನು ಮನೆಯಲ್ಲಿ ಬಂದಿಸುವ ಎಲ್ಲ ದುರ್ಗಮ ಪರಿಸರಗಳಲ್ಲಿ ಕಾಲ ದೀರ್ಘವೆನಿಸುತ್ತದೆ. ಅದನ್ನು ಕಳೆಯುವುದಕ್ಕೆ ಹಾಡುಗಳೂ ನಿಡಿದಾಗಿರುತ್ತವೆ.

ನಾಲ್ಕೈದು ಹಾಡುಗಳಾದ ಬಳಿಕ, ನಮ್ಮ ವಸತಿದಾತ ಕುಣಿಯಲು ನಮ್ಮನ್ನು ಆಹ್ವಾನಿಸಿದ. ಎರಡೂ ಕೈಗಳನ್ನು ಬಗೆಬಗೆಯಲ್ಲಿ ತಟ್ಟುತ್ತ, ಮೈಯನ್ನು ಮಣಿಸುತ್ತ ವೃತ್ತಾಕಾರವಾಗಿ ಸುತ್ತುವ ಸರಳ ನೃತ್ಯವದು. ಕೈಕಾಲುಗಳ ಭಂಗಿಗಳಲ್ಲಿ ಸಣ್ಣ ಬದಲಾವಣೆ ಮಾಡುವ ಮೂಲಕ ಕುಣಿತದ ಲಯ ತಟ್ಟನೆ ಬದಲಾಗುತ್ತಿತ್ತು. ನಾವು ಕುಣಿದೆವು. ಲಡಾಕಿನ ನುಬ್ರಾ ಕಣಿವೆಯಲ್ಲಿ ಬಾನು, ಟಿಬೆಟಿಯನ್ ಹಾಡು ನರ್ತಕಿಯರ ಜತೆ ತನ್ಮಯವಾಗಿ ಕುಣಿದಳು. ಅವರ ಜತೆಗೇ ಎಲ್ಲಿ ಹೋಗಿಬಿಡುತ್ತಾಳೊ ಎಂದು ನನಗೆ ಆತಂಕವಾಯಿತು. ಹಿಮಾಲಯಕ್ಕೆ ದಂಪತಿಗಳನ್ನು ಅಗಲಿಸುವ ಶಕ್ತಿಯಿದ್ದರೆ ತೋರಿಸಲಿ ಎಂಬ ಸಮಾಧಾನದಲ್ಲಿ ನಾನಿದ್ದೆ. ಇವಳ ತಪ್ಪುಹೆಜ್ಜೆ, ಮನಸೋಯಿಚ್ಛೆ ಕೈತಿರುವುಗಳನ್ನು ನೋಡಿ, ಮೂಲಗಾಯಕರು ತಾವು ಕಲಿತಿದ್ದನ್ನು ಮರೆಯುವ ಸಾಧ್ಯತೆಯೂ ಇತ್ತು.

ಎಲ್ಲ ಯಾತ್ರಾ ನಡಿಗೆಗಳು ಘೋಷಣೆ ಮತ್ತು ಹಾಡುಗಳನ್ನು ಸೃಷ್ಟಿಸಿವೆ. ಕನ್ನಡದಲ್ಲಿ ಶ್ರೀಶೈಲ ಮತ್ತು ಮಲೆಮಾದೇಶ್ವರ ಬೆಟ್ಟದ ನಡಿಗೆಗಳಲ್ಲಿ ಹಾಡುಗಳಿವೆ. ಪಂಡರಾಪುರಕ್ಕೆ ಹೋಗುವ ವಾರಕರಿಗಳಂತೂ ಹಾಡಿನ ಹೊಳೆಗಳು. ಕೇದಾರ ಬದರಿ ಹೋಗುವವರು ನಡೆಯುತ್ತ ಹಾಡುವುದಿಲ್ಲ. ಆಮ್ಲಜನಕ ಕಡಿಮೆಯಿರುವ ಪರ್ವತಗಳ ಹಾದಿಯಲ್ಲಿ ಉಸಿರಾಟವೇ